ವಿಚಾರಣೆ ಮಾಡಿದಾಗ ಅವುಗಳಲ್ಲಿ ನಿಜಾಂಶಗಳಿಲ್ಲವೆಂದು ಗೊತ್ತಾಯಿತು. ಈಗಲೂ ಕೂಡ ಅವರ ಮೇಲೆ ಗುರುತು ಆರೋಪಗಳು ಯಾವುದಾದರೂ ಇದ್ದಲ್ಲಿ ಅವಗಳನ್ನು ತಿಳಿಸಿದರೆ ವಿಚಾರಣೆ ಮಾಡುತ್ತೇವೆ. ಆರೋಪಗಳು ಸಾಬೀತಾದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ.

ವಿದ್ಯುತ್ ಹಂಚಿಕೆ, ಬೆಂಗಳೂರಿನ ಪ್ರಧಾನ ಅಭಿಯಂತರರಿಗೆ ಸೇರಿದ್ದು, ಕಾರ್ಯಪಾಲಕ ಅಭಿಯಂತರವರ ಜವಾಬ್ದಾರಿ ಇದರಲ್ಲಿ ಏನೂ ಇಲ್ಲ.

ದಾವಣಗೆರೆಯಲ್ಲಿ ಒಬ್ಬ ಕಾರ್ಯಪಾಲಕ ಅಭಿಯಂತರರು ಇದ್ದಾರೆ. ದಾವಣಗೆರೆಯಲ್ಲಿನ ಟ್ರಾನ್ಸ್‌ಫಾರ್ಮರ್ ರಿಪೇರಿ ಜವಾಬ್ದಾರಿ ದಾವಣಗೆರೆ ಕಾರ್ಯಪಾಲಕ ಅಭಿಯಂತರರಿಗೆ ಸೇರಿದ್ದು, ಇದರಲ್ಲೂ ಕೂಡ ಚಿತ್ರದುರ್ಗದ ಕಾರ್ಯಪಾಲಕ ಅಭಿಯಂತರರಿಗೆ ಯಾವ ಜವಾಬ್ದಾರಿಯೂ ಇಲ್ಲ.

೩) ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ಅಧ್ಯಾಪಕರಿಲ್ಲದೆ ತೊಂದರೆಯಾಗಿರುವುದು.

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡದ ಪ್ರಾಥಮಿಕ ಶಾಲೆಗಳಲ್ಲಿ ಅನೇಕ ಕಡೆ ಸಾಕಷ್ಟು ಅಧ್ಯಾಪಕರಿಲ್ಲದೆ ಭಾರಿ ತೊಂದರೆ ಒದಗಿದೆ. ಸುಮಾರು ೧೮೦ ಮಕ್ಕಳಿಗೆ ಒಬ್ಬ ಅಧ್ಯಾಪಕರಿಲ್ಲದ ಶಾಲೆಗಳೂ ಸಾಕಷ್ಟು ಇವೆ. ಜಿಲ್ಲಾ ವಿದ್ಯಾಧಿಕಾರಿಯನ್ನು ಕೇಳುವಾಗ ಜಿಲ್ಲಾ ಪರಿಷತ್ತಿನ ಕಡೆ ಕೈ ತೋರಿಸುತ್ತಾರೆ. ಜಿಲ್ಲಾ ಪರಿಷತ್ತಿನವರು ಸರ್ಕಾರದ ಅನುಮೋದನೇ ಬರಬೇಕಾಗಿದೆ ಎನ್ನುತ್ತಾರೆ. ಮಕ್ಕಳಿಗೆ ಪಾಠ ಪ್ರವಚನಕ್ಕೆ ತೀವ್ರ ಅಡಚಣೆಯಾಗಿದೆ. ಸುಮಾರು ೧೮೦ ಅಧ್ಯಾಪಕರ ಕೊರತೆ ದಕ್ಷಿಣ ಕನ್ನಡದಲ್ಲಿದೆ. ಈ ವಿಚಾರ ಅತಿ ಪ್ರಾಮುಖ್ಯವಾಗಿರುತ್ತದೆ. ಈ ಕುರಿತು ಪ್ರಾಥಮಿಕ ವಿದ್ಯಾ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೆ, ಉತ್ತರವನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು.— ಉತ್ತರ ತರಿಸಿಕೊಡುತ್ತಾರೆ.

೪) ಗ್ರಾಮಾಂತರ ಪ್ರದೇಶಗಳಲ್ಲಿರುವ ಸಮುದಾಯ ಆರೋಗ್ಯ ಕಾರ್ಯಕರ್ತರ ಸಂಭಾವನೆ ಹೆಚ್ಚಿಸುವ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೆ. ಗ್ರಾಮಾಂತರ ಪ್ರದೇಶಗಳಲ್ಲಿ ಜನತೆಗೆ ಸೇವೆ ಮಾಡುವ ಕರ್ನಾಟಕ ರಾಜ್ಯದಲ್ಲಿ ಸುಮಾರು ೫೧,೦೦೦ ಸಮುದಾಯ ಆರೋಗ್ಯ ಕಾರ್ಯಕರ್ತರಿದ್ದಾರೆ, ಅವರು ಬೇರ್‌ಫುಟ್ ಡಾಕ್ಟರ್‌ಗಳೆಂದು ಹೆಸರು ಹೊಂದಿದ್ದು, ಅವರಿಗೆ ಮಾಸಿಯಾನ ೫೦-೦೦ ಸಂಭಾವನೆ ಕೊಡುತ್ತಿರುವುದು ತುಂಬಾ ಅನ್ಯಾಯ ಅದು ಹೆಚ್ಚಬೇಕು. ಅವರಿಗೆ ಅವರ ಕೆಲಸ ಕಾರ್ಯ ನಿರ್ವಹಿಸಲು ಔಷಧಿಗಳನ್ನು ಕೊಡಬೇಕು. ಅದನ್ನು ಸರಿಯಾಗಿ ವಿತರಣೆ ಮಾಡುತ್ತಿಲ್ಲ.

ಈ ಬಗ್ಗೆ ಈಗ ಅವರು ಹೋರಾಟದ ಹಾದಿಗಿಳಿದಿದ್ದಾರೆ. ಅವರ ನ್ಯಾಯಯುತ ಬೇಡಿಕೆಗಳಿಗೆ ಮನ್ನಣೆ ನೀಡುವುದು ಅಗತ್ಯ. ಈ ಬಗ್ಗೆ ಮಾನ್ಯ ಆರೋಗ್ಯ ಕುಟುಂಬ ಕಲ್ಯಾಣ ಸಚಿವರ ಹೇಳಿಕೆಯನ್ನು ಸದನದಲ್ಲಿ ಕೇಳಲಿಚ್ಛಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಲಕ್ಷ್ಮೀಸಾಗರ್‌ರವರು ಯಾವಾಗಲೂ ಮೆಕ್ಯಾನಿಕಲ್ ಆಗಿ ಉತ್ತರವನ್ನು ಹೇಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಏನು ಮಾಡಬೇಕೆಂಬುದನ್ನು ನೀವೇ ಹೇಳಿದರೆ ಒಳ್ಳೆಯದು.